


ನಂತರ ಇಬ್ಬರೂ ಒಂದೇ ಎಂಜಿನಿಯರಿಂಗ್ ಕಾಲೇಜು ಸೇರಿದ್ದರು. ಇವನದ್ದು ಕಂಪ್ಯೂಟರ್ ಸೈನ್ಸ್. ಆಕೆಯದು ಈ ಅಂಡ್ ಸೀ. ಅಲ್ಲಿ ಯಾರೋ ಲೋಕಲ್ ಹುಡುಗ ಈಕೆಗೆ ಛೇಡಿಸಿದನೆಂದು ಬಹಳ ಶೌರ್ಯದಲ್ಲಿ ಒಬ್ಬನೇ ಪ್ರಶ್ನಿಸಲು ಹೋಗಿ ಮುಖದ ತುಂಬ ಹೊಲಿಗೆಗಳನ್ನು ಹಾಕಿಸಿಕೊಂಡು ಬಂದಿದ್ದ. ಇದಾದ ಮೇಲೆ ಆಕೆಗೆ ಇವನ ಮೇಲೆ ಪ್ರೇಮ ಭಾವನೆ ಬೆಳೆದಿತ್ತು. ಹೀಗೆ ಇನ್ನೊಂದಿಷ್ಟು ಪ್ರೇಮ ಪರೀಕ್ಷೆಗಳ ನಂತರ ಕಡೆಯ ವರ್ಷದ ವಿಟಿಯು ಕಲ್ಚರಲ್ ಫೆಸ್ಟ್‌ನಲ್ಲಿ ಇಬ್ಬರೂ ಪ್ರೇಮಿಗಳಾಗಿದ್ದರು. ತದನಂತರ ದೈಹಿಕ ಕೊಡುಕೊಳ್ಳುವಿಕೆ. ಮದುವೆಯ ಯೋಚನೆ. ಮನೆಗಳಲ್ಲಿ ಪ್ರಸ್ತಾಪ ಇದೆಲ್ಲ ನಡೆದುಹೋಗಿತ್ತು. ಪರೀಕ್ಷೆಯ ನಂತರ ಬೆಂಗಳೂರಿನಲ್ಲಿ ಕೆಲಸ ಮಾಡಲು ಶುರು ಮಾಡಿದ ನಂತರ ವಿವಾಹ ಎಂದು ಗುರು ಹಿರಿಯರ ಸಮ್ಮುಖದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಇನ್ನು ಮೂರು ಪೇಪರು ಮತ್ತು ಪ್ರೊಜೆಕ್ಟ್ ಪ್ರೆಸೆಂಟೇಶನ್ ಮಾತ್ರ ಬಾಕಿ ಇದ್ದವು. ಅಂದು ನಡೆದ ದುರ್ಘಟನೆ ರಾಘವನ ಜೀವನನ್ನೇ ಬುಡಮೇಲು ಮಾಡಿಬಿಟ್ಟಿತ್ತು. ರಾಘವ ಹಾಸ್ಟೆಲಿನಲ್ಲಿ ಮಲಗಿದ್ದಾಗ ತಕ್ಷಣವೇ ರಿಂಗಾದ ಫೋನಿಗೆ ಬೆಚ್ಚಿಬಿದ್ದು ಎದ್ದ. ಜಾಹ್ನವಿಯ ಕಾಲ್ ಅದಾಗಿತ್ತು. ಉದ್ವೇಗದಿಂದ ಮಾತನಾಡಿದ ಜಾಹ್ನವಿ, 'ತಾಯಿಗೆ ಲಘು ಹೃದಯಘಾತವಾಗಿ ಆಸ್ಪತ್ರೆಗೆ ಸೇರಿಸಿದ್ದಾರೆ. ನಾನು ಈ ಕೂಡಲೇ ಹೋಗಬೇಕು. ಜಲ್ದಿ ನಿನ್ ಬೈಕ್ ಮೇಲೆ ಬಸ್ ಸ್ಟ್ಯಾಂಡಿಗೆ ಡ್ರಾಪ್ ಮಾಡು ಬಾ' ಎಂದಿದ್ದಳು. ತಾನು ಒಟ್ಟಿಗೆ ಬರುತ್ತೇನೆ ಎಂದರೂ ಒಪ್ಪದೇ, 'ನೀನು ಎಕ್ಸಾಮ್ ಮುಗಿಸಿ ಬರುವಿಯಂತೆ'ಎಂದು ಒತ್ತಾಯಿಸಿದ್ದಳು. ರಾಘವ ತಕ್ಷಣವೇ ತನ್ನ ಯಮಃ ಆರ್.ಎಕ್ಸ್. ಬೈಕ್ ತೆಗೆದುಕೊಂಡು ಪಟ್ ಪಟ್ ಎನ್ನಿಸುತ್ತ ಊರಿಗೆಲ್ಲ